# ಪಾಬ್ಲೊ ನೆರೂಡ ನೆನಪುಗಳು

## ಶೀಲ, ಅಶ್ಲೀಲಗಳ ವಿಶ್ಲೇಷಣೆ

ನೆರೂಡನ ಕಾವ್ಯವನ್ನು ಸಂಭ್ರಮಿಸುವ ಕನ್ನಡ ವಿಮರ್ಶಾ ಪರಂಪರೆಗೆ, ಕವಿ ಎಸಗಿದ ಲೈಂಗಿಕ ದೌರ್ಜನ್ಯ ಮುಖ್ಯ ಎನ್ನಿಸಲಿಲ್ಲವೇಕೆ?



**ಶಶಿಕುಮಾರ್**

ಇಪ್ಪತ್ತನೆಯ ಶತಮಾನದಲ್ಲಿ ರಾಜಕೀಯ ಪ್ರತಿರೋಧ ಹಾಗೂ ಸೈದ್ಧಾಂತಿಕ ಬದ್ಧತೆಯೊಂದಿಗೆ ಸಾಹಿತ್ಯವನ್ನು ರಚಿಸಿದವರಲ್ಲಿ ನನಗೆ ಮೊದಲು ನೆನಪಿಗೆ ಬರುವುದು ಬರ್ಟೋಲ್ಟ್ ಬ್ರೆಕ್ಟ್, ಫೆಡೆರಿಕೊ ಗಾರ್ಸಿಯಾ ಲೋರ್ಕಾ ಮತ್ತು ಪಾಬ್ಲೊ ನೆರೂಡ. ಈ ಮೂವರೂ ಸರ್ವಾಧಿಕಾರ ವಿರೋಧಿ ಧೋರಣೆಯನ್ನು ಪ್ರಶ್ನಿಸಲು ಮತ್ತು ಸಾಮಾಜಿಕ ಬದಲಾವಣೆಯನ್ನು ಪ್ರೇರೇಪಿಸಲು ಸಾಹಿತ್ಯವನ್ನು ಸಾಧನವಾಗಿ ಬಳಸಿಕೊಂಡವರು. ಆ ಕಾರಣಕ್ಕೆ ಜಾಗತಿಕ ಸಾಹಿತ್ಯದ ಮೇಲೆ ಅಪಾರವಾದ ಪ್ರಭಾವವನ್ನು ಬೀರಿದವರು. ಕನ್ನಡ ಸಾಹಿತ್ಯದ ಮೇಲೆ ಲೋರ್ಕಾ ಪ್ರಭಾವ ಇಲ್ಲಿಯವರೆಗೆ ದಟ್ಟವಾಗಿ ಆಗಿಲ್ಲವಾದರೂ, ಬ್ರೆಕ್ಟ್ ಹಾಗೂ ನೆರೂಡ ಪ್ರಭಾವ, ಪ್ರೇರಣೆ ಎದ್ದು ಕಾಣುವಂತಿವೆ. ಅದರಲ್ಲೂ ಎಪ್ಪತ್ತರ ದಶಕದಲ್ಲಿ ಹುಟ್ಟಿಕೊಂಡ ಪ್ರಗತಿಪರ, ಎಡಪಂಥೀಯ, ಸಮಾಜವಾದ ಎಂದೆಲ್ಲ ಗುರುತಿಸಲಾಗುವ ವೈಚಾರಿಕತೆ ಹಾಗೂ ಸೈದ್ಧಾಂತಿಕತೆಯ ಸೆಲೆಗಳಿಗೆ ಸಾಹಿತ್ಯಕ ನೆಲೆಗಳನ್ನು ಒದಗಿಸಿದ್ದು ಇವರು. ಅವರ ರಾಜಕೀಯ ಸೈದ್ಧಾಂತಿಕತೆ ಅವರ ಸೃಜನಶೀಲ ಅಭಿವ್ಯಕ್ತಿಗಳೊಂದಿಗೆ ಆಳವಾಗಿ ಹೆಣೆದುಕೊಂಡಿದ್ದು, ಅವರ ಕೃತಿಗಳು ಅವರ ಸಿದ್ಧಾಂತಗಳ ಪ್ರಬಲ ಪ್ರತಿಬಿಂಬಗಳಾಗಿವೆ. ಹಾಗಾಗಿಯೇ, ಸ್ವತಂತ್ರ ಭಾರತದ ಎಪ್ಪತ್ತರ ದಶಕದ ರಾಷ್ಟ್ರೀಯ ರಾಜಕೀಯ ವಿಪ್ಲವ, ತುರ್ತು ಪರಿಸ್ಥಿತಿಯ ಹೇರಿಕೆ, ಲೇಖಕ ಕಲಾವಿದರ ಸ್ವಾತಂತ್ರ್ಯಹರಣದ ಹಿನ್ನೆಲೆಯಿಂದ ನೋಡಿದಾಗ ಸಮಾಜವಾದಿ ಸಿದ್ಧಾಂತದಿಂದ ಪ್ರೇರಿತವಾದ ಕನ್ನಡ ಸಂಸ್ಕೃತಿಗೆ ಈ ಮೂವರ ರಾಜಕೀಯ ಸೈದ್ಧಾಂತಿಕ ಬದ್ಧತೆ ಒಂದು ಮಾದರಿಯನ್ನು ರೂಪಿಸಿಕೊಳ್ಳಲು ಸಹಾಯ ಮಾಡಿತೆಂಬುದನ್ನು ಕಾಣಬಹುದು.

ಮಾರ್ಕ್ಸ್‌ವಾದಿಯಾಗಿದ್ದ, ‘ಎಪಿಕ್ ಥಿಯೇಟರ್’ನ ಕರ್ತೃ ಬ್ರೆಕ್ಟ್, 1956ರಲ್ಲಿ ಅರವತ್ತು ದಾಟುವ ಮುನ್ನ ಹೃದಯಾಘಾತದಿಂದ ತೀರಿಕೊಳ್ಳುವ ವೇಳೆಗಾಗಲೇ ಹಿಟ್ಲರ್‌ನ ಸರ್ವಾಧಿಕಾರವನ್ನು ತನ್ನ ಕಾವ್ಯ ಹಾಗೂ ನಾಟಕಗಳ ಮೂಲಕ ತೀವ್ರವಾಗಿ ಖಂಡಿಸಿದ್ದರು. 1936ರಲ್ಲಿ ಸ್ಪ್ಯಾನಿಶ್ ಸಿವಿಲ್ ವಾರ್ ಆರಂಭವಾದ ಒಂದೇ ತಿಂಗಳಿಗೆ ರಾಷ್ಟ್ರೀಯತಾವಾದಿಗಳಿಂದ